ವಿಜಯ ಕರ್ನಾಟಕ

## ದೇಶದಲ್ಲೇ ಅಪೂರ್ವ ಸಂಶೋಧನೆ ನಡೆಸಿದ ಪ್ರಿಯಾಂಕ ಪ್ರಭಾಕರ್

# ನಿವೃತ್ತ ಮನಸ್ಸಿನ ಹತ್ತಾರು ಮುಖಗಳು



■ **ಸೋಮಶೇಖರ್ ಪಡುಕರೆ** ಬೆಂಗಳೂರು



ಪ್ರಿಯಾಂಕ ಪ್ರಭಾಕರ್

ಕ್ರೀಡಾಂಗಣದಲ್ಲಿ ನಿರಂತರ ಸಾಧನೆ ತೋರಿದ ಕ್ರೀಡಾಪಟುಗಳು ಒಂದು ದಿನ ನಿವೃತ್ತಿ ಹೊಂದಬೇಕಾಗುತ್ತದೆ. ಅಂಗಣದಲ್ಲಿ ಅವರು ಸಾಧನೆ ಮಾಡುವಾಗ ಕೊಂಡಾಡಿದ ಅಭಿಮಾನಿಗಳು ನಿವೃತ್ತಿಯ ನಂತರ ನಿಧಾನವಾಗಿ ಮರೆತುಬಿಡುತ್ತಾರೆ. ಕ್ರೀಡಾಂಗಣದಿಂದ ನಿರ್ಗಮಿಸಿದ ನಂತರ ಆ ಸಾಧಕರ ಮನಸ್ಥಿತಿ ಹೇಗಿರುತ್ತದೆ?, ಅವರ ಹೊಸ ಬದುಕಿನ ಹಾದಿ ಯಾವ ರೀತಿಯಲ್ಲಿ ಮುನ್ನಡೆಯುತ್ತದೆ?, ಹೊಸ ಜಗತ್ತಿಗೆ ಅವರು ಹೇಗೆ ಹೊಂದಿಕೊಳ್ಳುತ್ತಾರೆ? ಎಂಬೆಲ್ಲ ಅಂಶಗಳನ್ನು ಗಮನದಲ್ಲಿರಿಸಿಕೊಂಡು ಬೆಂಗಳೂರಿನ ಮನಃಶಾಸ್ತ್ರಜ್ಞೆಯೊಬ್ಬರು ಸಂಶೋಧನೆ ಮಾಡಿದ್ದಾರೆ,

ಪ್ರಿಯಾಂಕ ಪ್ರಭಾಕರ್. ಮಾಜಿ ಬಾಸ್ಕೆಟ್‌ಬಾಲ್ ಆಟಗಾರ್ತಿ. ಕ್ರೀಡೆಯಲ್ಲಿ ಯಶಸ್ಸು ಕಾಣಲು ಅಸಾಧ್ಯವಾದಾಗ ಪ್ರಿಯಾಂಕ ಆಯ್ಕೆ ಮಾಡಿಕೊಂಡಿದ್ದು ಕ್ರೀಡೆಗೆ ಸಂಬಂಧಿಸಿದ ವಿಷಯದ ಕುರಿತು ಅಧ್ಯಯನ. ಮನಃಶಾಸ್ತ್ರದ ಬಗ್ಗೆ ಪದವಿ ಮುಗಿಸಿದ ಈ ಬಾಸ್ಕೆಟ್‌ಬಾಲ್ ಆಟಗಾರ್ತಿ, ನಂತರ ನಿವೃತ್ತ ಕ್ರೀಡಾಪಟುಗಳ ಮನಸ್ಸು ಹಾಗೂ ಬದುಕಿನ ಬಗ್ಗೆ ಸಂಶೋಧನೆ ನಡೆಸಲು ಆರಂಭಿಸಿದರು. ಭಾರತದ ಶ್ರೇಷ್ಠ ಕ್ರೀಡಾ ಮನಃಶಾಸ್ತ್ರಜ್ಞೆ ಡಾ. ಚೈತನ್ಯ ಶ್ರೀಧರ್ ಅವರ ಮಾರ್ಗದರ್ಶನದಲ್ಲಿ ಪ್ರಿಯಾಂಕ ""A study on Quality of life of Retired Athleets" ಎಂಬ ವಿಷಯದ ಕುರಿತು ಸಂಶೋಧನೆ ನಡೆಸಿದ್ದಾರೆ.

'ವಿಜಯಕರ್ನಾಟಕ'ದೊಂದಿಗೆ ಪ್ರಿಯಾಂಕ ತಾವು ನಡೆಸಿದ ಸಂಶೋಧನೆಯ ರೀತಿಯನ್ನು ಹೇಳಿಕೊಂಡಿದ್ದಾರೆ, ''ಬಾಸ್ಕೆಟ್‌ಬಾಲ್ ಕ್ರೀಡೆಯಲ್ಲಿ ತೊಡಗಿಸಿಕೊಳ್ಳಬೇಕೆಂಬ ಹಂಬಲ ಉತ್ತಮವಾಗಿತ್ತು, ಆದರೆ ಉತ್ತಮ ಅವಕಾಶ ಸಿಗಲಿಲ್ಲ. ಈ ಕಾರಣಕ್ಕಾಗಿ ಮನಃಶಾಸ್ತ್ರವನ್ನು ಅಧ್ಯಯನ ಮಾಡಿ, ನಂತರ ನಿವೃತ್ತಿ ಹೊಂದಿದ ಕ್ರೀಡಾಪಟುಗಳ ಮನಸ್ಸು ಹಾಗೂ ಅವರ ಬದುಕಿನ ಕುರಿತು ಅಧ್ಯಯನ ಮಾಡಲು ಆರಂಭಿಸಿದೆ, ನಿಜವಾಗಿಯೂ ಅದೊಂದು ಅದ್ಭುತ ಅನುಭವ,'' ಎಂದಿದ್ದಾರೆ.



**ಇದು ಅತ್ಯಂತ ಉತ್ತಮವಾದ ಸಂಶೋಧನೆ, ಕ್ರೀಡೆಯಲ್ಲಿ ಮನಃಶಾಸ್ತ್ರಕ್ಕೆ ಹೆಚ್ಚಿನ ಒತ್ತು ನೀಡಬೇಕಾಗಿದೆ. ಈ ಹಿನ್ನೆಲೆಯಲ್ಲಿ ಪ್ರಿಯಾಂಕ ಅವರ ಶ್ರಮ ಅತ್ಯಂತ ಪ್ರಮುಖವಾದುದು. ಇದು ನಿವೃತ್ತಿಯಾಗಿರುವ ಹಾಗೂ ಪ್ರಸಕ್ತ ಸ್ಪರ್ಧೆಯಲ್ಲಿರುವ ಕ್ರೀಡಾಪಟುಗಳಿಗೆ ಹೆಚ್ಚು ನೆರವಾಗಲಿದೆ.**

**-ಡಾ. ಶಂಕರ್ ಯು ವಿ**

ಕ್ರೀಡಾ ನಿರ್ದೇಶಕರು, ಜೈನ್ ವಿಶ್ವವಿದ್ಯಾನಿಲಯ



**ಭಾರತದ ಕ್ರೀಡಾ ಸಂಶೋಧನೆಯಲ್ಲೇ ಪ್ರಿಯಾಂಕ ಅವರ ಅಧ್ಯಯನ ವಿಶೇಷವಾದುದು. ಕ್ರೀಡಾ ಸಾಧಕರ ಬಗ್ಗೆ ಸಾಕಷ್ಟು ಸಂಶೋಧನೆಗಳು ನಡೆದಿವೆ. ಆದರೆ ನಿವೃತ್ತಿಯ ನಂತರದ ಬದುಕಿನ ಬಗ್ಗೆ ಸಂಶೋಧನೆ ನಡೆದಿಲ್ಲ, ಕ್ರೀಡಾ ಸಾಧಕರಿಗೆ ಈ ಸಂಶೋಧನೆ ಉತ್ತಮ ರೀತಿಯಲ್ಲಿ ನೆರವಾಗಲಿದೆ.**

**-ಡಾ. ಚೈತನ್ಯ ಶ್ರೀಧರ್**

ಕ್ರೀಡಾ ಮನಃಶಾಸ್ತ್ರಜ್ಞರು

**150 ಕ್ರೀಡಾ ಪಟುಗಳ ಬದುಕು:** ಪ್ರಿಯಾಂಕ ಕ್ರೀಡೆಯಿಂದ ನಿವೃತ್ತಿ ಹೊಂದಿದ 150 ಕ್ರೀಡಾಪಟುಗಳ ಬದುಕಿನ ಬಗ್ಗೆ ಅಧ್ಯಯನ ಮಾಡಿದ್ದಾರೆ. ಈ ಸಂದರ್ಭದಲ್ಲಿ ಅವರು ತರಬೇತುದಾರರ ನೆರವನ್ನು ಪಡೆದಿದ್ದಾರೆ. ಹೆಚ್ಚಿನ ಕ್ರೀಡಾಪಟುಗಳನ್ನು ವೈಯಕ್ತಿಕವಾಗಿ ಭೇಟಿ ಮಾಡಿದ್ದರೆ, ಇನ್ನು ಕೆಲವನ್ನು ದೂರವಾಣಿ ಹಾಗೂ ಇಮೇಲ್ ಮೂಲಕ ಸಂಪರ್ಕಿಸಿದ್ದಾರೆ. ಕ್ರಿಕೆಟ್, ಹಾಕಿ, ಟೆನಿಸ್, ಈಜು ಹಾಗೂ ಅಥ್ಲೆಟಿಕ್ಸ್ ವಿಭಾಗದಿಂದ ನಿವೃತ್ತಿಯಾದವರ ಬದುಕು ಪ್ರಿಯಾಂಕ ಅವರ ಸಂಶೋಧನೆಯಲ್ಲಿದೆ.

''ಕೆಲವರು ಶಿಕ್ಷಣ, ಇನ್ನು ಕೆಲವರು ಗಾಯದ ಸಮಸ್ಯೆ, ಇನ್ನು ಕೆಲವರು ಕೆಲಸ ಹಾಗೂ ಕ್ರೀಡಾ ಬದುಕನ್ನು ಸರಿದೂಗಿಸಿಕೊಳ್ಳಲಾಗದೆ, ಕುಟುಂಬ ಹಾಗೂ ಹಣಕಾಸಿನ ಸಮಸ್ಯೆ ಸೇರಿದಂತೆ ಹಲವು ಕಾರಣಗಳಿಂದ ಕ್ರೀಡಾಪಟುಗಳು ನಿವೃತ್ತಿಯಾಗುತ್ತಾರೆ. ಎಂಬ ಅಂಶ ಸಂಶೋಧನೆಯಿಂದ ತಿಳಿದು ಬಂತು,'' ಎಂದು ಪ್ರಿಯಾಂಕ ಹೇಳಿದ್ದಾರೆ.

**ವಾಸ್ತವ ಬದುಕಿಗೆ ಹೊಂದಿಕೊಳ್ಳಲು ಕಷ್ಟ:** ಅನೇಕ ಕ್ರೀಡಾಪಟುಗಳು ಉತ್ತಮ ಸಾಧನೆ ಮಾಡಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡಿರುತ್ತಾರೆ. ನಿವೃತ್ತಿಯ ನಂತರ ಅವರಿಗೆ ವಾಸ್ತವ ಬದುಕಿಗೆ ಹೊಂದಿಕೊಳ್ಳುವುದು ಕಷ್ಟವಾಗುತ್ತದೆ. ಅನೇಕ ಕ್ರೀಡಾಪಟುಗಳು ತಾವು ಕೈಗೊಂಡ ನಿವೃತ್ತಿಯ ನಿರ್ಧಾರದ ಬಗ್ಗೆ ಖೇದವನ್ನೂ ವ್ಯಕ್ತಪಡಿಸಿದ್ದಾರೆ. ಕೆಲವರು ನಿವೃತ್ತಿ ಎಂದರೆ ತಮ್ಮ ಪಾಲಿಗೆ ಬಂದ 'ಸಾವು' ಎಂದೂ ಹೇಳಿಕೊಂಡಿದ್ದಾರೆ. ಕೆಲವರು ನಿವೃತ್ತಿ ಹೊಂದಿ ಐದು ವರ್ಷ ಕಳೆದರೂ ಕ್ರೀಡಾ ಬದುಕಿನಿಂದ ಹೊರಬರಲಾಗದ ಸ್ಥಿತಿಯಲ್ಲಿದ್ದಾರೆ. ಕೆಲವರು ನಿವೃತ್ತಿಯ ನಂತರವೂ ಕ್ರೀಡಾ ಚಟುವಟಿಕೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ ಎಂಬ ಅಂಶಗಳು ಪ್ರಿಯಾಂಕ ಅವರ ಸಂಶೋಧನಾ ಪ್ರಬಂಧದಲ್ಲಿದೆ.

ಶೇ. 38ರಷ್ಟು ಕ್ರೀಡಾಪಟುಗಳು ಶಿಕ್ಷಣದ ಕಾರಣವನ್ನೊಡ್ಡಿ ಬೇಗನೇ ನಿವೃತ್ತಿ ಹೊಂದಿರುವುದು ಸಂಶೋಧನೆಯಿಂದ ತಿಳಿದು ಬಂದಿದೆ.